## -** 150 ನೇ ಗಾಂಧಿ ಜಯಂತಿ ಕಾರ್ಯಕ್ರಮ **-

ದಿನಾಂಕ 02-10-2019 ರ ಬುಧವಾರದಂದು ಶಾಂತಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು ಮಳವಳ್ಳಿ. ರಾಷ್ಟ್ರೀಯ ಸೇವಾ ಯೋಜನೆ, ರಾಷ್ಟ್ರೀಯ ಸೇನಾ ದಳ ಹಾಗು ಸ್ಕೌಟ್ ಆಂಡ್ ಗೈಡ್ಸ್ ನ ಸಹಯೋಗದಲ್ಲಿ ಕಾಲೇಜಿನ ಒಳಾಂಗಣದಲ್ಲಿ **ಗಾಂಧೀಜಿಯವರ 150ನೇ ಜಯಂತಿ** ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.ಈ ಕಾರ್ಯಕ್ರಮಕ್ಕೆ ರಾ.ಸೇ.ಯೋ ನ ಸುಮಾರು 85 ಸ್ವಯಂ ಸೇವಕರು ಹಾಜರಿದ್ದರು. ಗಾಧೀಜಿಯವರ ಭಾವಚಿತ್ರಕ್ಕೆ ಆರತಿ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ರಾ.ಸೇ.ಯೋ ಯ ಕಾರ್ಯಕ್ರಮಾಧಿಕಾರಿಗಳಾದ ಶ್ರೀ.ಬಿ ಯೋಗಾನಂದರವರು ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡಿ ಗಾಂಧೀಜಿಯವರ ತತ್ವ ಮತ್ತು ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಸಾರ್ಥಕ ಜೀವನ ನಡೆಸಬೇಕು ಎಂದು ಹೇಳಿದರು.

ಭಾರತ ಸರ್ಕಾರದ ಆದೇಶದಂತೆ ಸ್ವಯಂ ಸೇವಕರಿಗೆ ರಾ.ಸೇ.ಯೋ ನ ಕಾರ್ಯಕ್ರಮಾಧಿಕಾರಿಗಳಾದ ಶ್ರೀ.ಬಿ ಯೋಗಾನಂದರವರು ಸ್ವಚ್ಛತೆಯ ಪ್ರತಿಜ್ಞಾ ವಿಧಿಯನ್ನು ಭೋದಿಸಿದರು.ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸೇನಾ ದಳದ ಅಧಿಕಾರಿಗಳಾದ ಲೆಫ್ಟಿನೆಂಟ್ ಕೆ.ಆರ್.ಪುಟ್ಟಸ್ವಾಮಿಯವರು ಮತ್ತು ಸ್ಕೌಟ್ ಆಂಡ್ ಗೈಡ್ಸ್ ನ ಅಧಿಕಾರಿಗಳಾದ ಶ್ರೀ.ಮಲ್ಲೇಶ್ ರವರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಪ್ರಾಂಶುಪಾಲರು
ಶಾಂತಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು
ಮಳವಳ್ಳಿ - 571 430.

Scanned by CamScanner




Scanned by CamScanner




Scanned by CamScanner




Scanned by CamScanner



Scanned by CamScanner



Scanned by CamScanner